**ಅಧ್ಯಕ್ಷರು, ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಬೆಂಗಳೂರು ಹಾಗೂ ನೇಮಕಾತಿ ಮತ್ತು ಶಿಸ್ತು ಪ್ರಾಧಿಕಾರಿ, ಕರ್ನಾಟಕ ಗ್ರಾಹಕ ಸಂರಕ್ಷಣಾ ರಾಜ್ಯ ಆಯೋಗ ಮತ್ತು ಜಿಲ್ಲಾ ವೇದಿಕೆಗಳ ಸೇವೆ, ಇವರ ನಡವಳಿ ದಿನಾಂಕ:16.04.2016**

ಕರ್ನಾಟಕ ಗ್ರಾಹಕ ಸಂರಕ್ಷಣಾ ರಾಜ್ಯ ಆಯೋಗ ಮತ್ತು ಜಿಲ್ಲಾ ವೇದಿಕೆಗಳ ಸೇವೆಯಲ್ಲಿ ರಾಜ್ಯ ವ್ಯಾಪಿ ಉಳಿಕೆ ವೃಂದದಲ್ಲಿ ಖಾಲಿ ಇರುವ 12 ಮತ್ತು ಹೈದ್ರಾಬಾದ್-ಕರ್ನಾಟಕದ ರಾಜ್ಯ ವ್ಯಾಪಿ ಸ್ಥಳೀಯ ವೃಂದದಲ್ಲಿ ಖಾಲಿ ಇರುವ 02 ಒಟ್ಟು 14 ಶೀಘ್ರಲಿಪಿಗಾರರ ಹುದ್ದೆಗಳನ್ನು ಭರ್ತಿ ಮಾಡುವ ಸಲುವಾಗಿ ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧಿಸೂಚನೆ ಸಂಖ್ಯೆ:ಕರಾಆ/ಆಡಳಿತ/96/2015 ದಿನಾಂಕ:06.08.2015 ಇದರ ಅಡಿಯಲ್ಲಿ ಸ್ವೀಕೃತವಾದ ಒಟ್ಟು 128 ಅರ್ಜಿಗಳ ಪೈಕಿ 71 ಅರ್ಜಿದಾರರನ್ನು ದಿನಾಂಕ:31.01.2016 ರಂದು ಕನ್ನಡ ಮತ್ತು ಆಂಗ್ಲ ಶೀಘ್ರಲಿಪಿ ಹಾಗೂ ಕನ್ನಡ ಮತ್ತು ಆಂಗ್ಲ ಬೆರಳಚ್ಚು ಪ್ರೌಢ ದರ್ಜೆಗೆ ಸರಿಸಮಾನವಾದ ಲಘು ಪರೀಕ್ಷೆಗೆ ಆಹ್ವಾನಿಸಿದ್ದು, 45 ಅಭ್ಯರ್ಥಿಗಳು ಮಾತ್ರ ಸಂಪೂರ್ಣವಾಗಿ ಎಲ್ಲಾ ವಿಷಯಗಳ ಲಘು ಪರೀಕ್ಷೆಗೆ ಹಾಜರಾಗಿದ್ದು, ಲಘು ಪರೀಕ್ಷೆಯ ನಂತರ ಕರ್ನಾಟಕ ಗ್ರಾಹಕ ಸಂರಕ್ಷಣಾ (ರಾಜ್ಯ ಆಯೋಗ ಮತ್ತು ಜಿಲ್ಲಾ ವೇದಿಕೆ) (ವೃಂದ ಮತ್ತು ನೇಮಕಾತಿ)ನಿಯಮಗಳು 2003 ರಡಿಯಲ್ಲಿ ಕರ್ನಾಟಕ ಗ್ರಾಹಕ ಸಂರಕ್ಷಣಾ ರಾಜ್ಯ ಆಯೋಗ ಮತ್ತು ಜಿಲ್ಲಾ ವೇದಿಕೆಗಳ ಸೇವೆಯ ರಾಜ್ಯ ವ್ಯಾಪಿ ಉಳಿಕೆ ವೃಂದದಲ್ಲಿ ಮತ್ತು ಹೈದ್ರಾಬಾದ್-ಕರ್ನಾಟಕದ ರಾಜ್ಯ ವ್ಯಾಪಿ ಸ್ಥಳೀಯ ವೃಂದದಲ್ಲಿ ಖಾಲಿ ಇರುವ ಹುದ್ದೆಗಳಿಗೆ ಸಂಬಂಧಪಟ್ಟ ಅಭ್ಯರ್ಥಿಗಳು ಶೀಘ್ರಲಿಪಿಗಾರರ ಕಾರ್ಯನಿರ್ವಹಿಸಲು ಯೋಗ್ಯರೇ ಮತ್ತು ಸೂಕ್ತರೇ ಎಂಬುದರ ಬಗ್ಗೆ ವೈಯಕ್ತಿಕವಾಗಿ ದಿನಾಂಕ:27.02.2016 ರಂದು ಸಂದರ್ಶನಕ್ಕೆ ಹಾಜರಾಗಿದ್ದ 39 ಅಭ್ಯರ್ಥಿಗಳನ್ನು ಸಂದರ್ಶಿಸಿ, ಈ ಕೆಳಕಂಡ ಅಭ್ಯರ್ಥಿಗಳನ್ನು ಮಾತ್ರ ಅವರ ಹೆಸರಿನ ಮುಂದೆ ಸೂಚಿಸಿರುವ ರಿಕ್ತ ಸ್ಥಾನಗಳಿಗೆ ಮುಖ್ಯ ಪಟ್ಟಿಯಲ್ಲಿ ಆಯ್ಕೆ ಮಾಡಲಾಗಿದೆ.

**ಕರ್ನಾಟಕ ಗ್ರಾಹಕ ಸಂರಕ್ಷಣಾ ರಾಜ್ಯ ಆಯೋಗ ಮತ್ತು ಜಿಲ್ಲಾ ವೇದಿಕೆಗಳ ಸೇವೆಯ ಉಳಿಕೆ ವೃಂದದಲ್ಲಿ ಖಾಲಿ ಇರುವ 11 ಶೀಘ್ರಲಿಪಿಗಾರರ ಮುಖ್ಯ ಪಟ್ಟಿ (Main List)**

| ಕ್ರಮ ಸಂಖ್ಯೆ | ಅರ್ಜಿ ಸಂಖ್ಯೆ | ಅಭ್ಯರ್ಥಿಗಳ ಹೆಸರು | ಆಯ್ಕೆ ಮಾಡಿರುವ ರಿಕ್ತ ಸ್ಥಾನದ ಹೆಸರು |
|---|---|---|---|
| 1. | 16 | ನಾಗಶ್ರೀ.ಜಿ | ಸಾಮಾನ್ಯ ಅಭ್ಯರ್ಥಿ(ಸಾಮಾನ್ಯ ಅಭ್ಯರ್ಥಿ) |
| 2. | 26 | ಸುನಿಲ್ ಕುಮಾರ್.ಎಸ್. | ಸಾಮಾನ್ಯ ಅಭ್ಯರ್ಥಿ(ಯೋ.ನಿ.ಅ) |
| 3. | 01 | ಅನಿತಾ ಸದಾಶಿವ ಕಿತ್ತೂರಕರ | ಪರಿಶಿಷ್ಟ ಜಾತಿ(ಗ್ರಾಮೀಣ ಅಭ್ಯರ್ಥಿ) |
| 4. | 49 | ರಮೇಶ ಅಳ್ಳಗಿ | ಸಾಮಾನ್ಯ (ಗ್ರಾಮೀಣ ಅಭ್ಯರ್ಥಿ) |
| 5. | 14 | ಕವಿತಾ.ಎಸ್ | ಸಾಮಾನ್ಯ ಅಭ್ಯರ್ಥಿ(ಸಾಮಾನ್ಯ ಅಭ್ಯರ್ಥಿ) |
| 6. | 28 | ರೂಪಾ ಅಥಣಿ | ಪ್ರವರ್ಗ-2ಎ (ಸಾಮಾನ್ಯ ಅಭ್ಯರ್ಥಿ) |
| 7. | 45 | ರಾವುತಪ್ಪ ಹೊರಪೇಟಿ | ಸಾಮಾನ್ಯ (ಗ್ರಾಮೀಣ ಅಭ್ಯರ್ಥಿ) |
| 8. | 20 | ಶಿವಯ್ಯ | ಪ್ರವರ್ಗ-2ಎ (ಕನ್ನಡ ಮಾಧ್ಯಮ ಅಭ್ಯರ್ಥಿ) |
| 9. | 59 | ಸುನಿಲ್ ಕುಮಾರ್.ಎನ್. | ಸಾಮಾನ್ಯ (ಗ್ರಾಮೀಣ ಅಭ್ಯರ್ಥಿ) |
| 10. | 9 | ಪಂಕಜ.ಪಿ | ಪರಿಶಿಷ್ಟ ಜಾತಿ (ಮಹಿಳಾ ಅಭ್ಯರ್ಥಿ) |
| 11. | 29 | ಸುಲೋಚನ.ಜೆ. | ಸಾಮಾನ್ಯ ಅಭ್ಯರ್ಥಿ(ಸಾಮಾನ್ಯ ಅಭ್ಯರ್ಥಿ) |

ಸಾಮಾನ್ಯ (ಅಂಗವಿಕಲ) ಅಭ್ಯರ್ಥಿಗಳು ಯಾರೂ ಲಭ್ಯವಿಲ್ಲದ ಕಾರಣ ಸದರಿ 01 ಹುದ್ದೆಯನ್ನು ಭರ್ತಿ ಮಾಡದೆ ಹಾಗೆಯೇ ಉಳಿಸಲಾಗಿದೆ.

ಕರ್ನಾಟಕ ಗ್ರಾಹಕ ಸಂರಕ್ಷಣಾ ರಾಜ್ಯ ಆಯೋಗ ಮತ್ತು ಜಿಲ್ಲಾ ವೇದಿಕೆಗಳ ಸೇವೆಯ ಹೈದ್ರಾಬಾದ್-ಕರ್ನಾಟಕದ ರಾಜ್ಯ ವ್ಯಾಪಿ ಸ್ಥಳೀಯ ವೃಂದದಲ್ಲಿ ಖಾಲಿ ಇದ್ದ 02 ಹುದ್ದೆಗಳಿಗೆ ಅಧಿಸೂಚನೆಯನ್ನು ಹೊರಡಿಸಿದ ನಂತರ, ಶೀಘ್ರಲಿಪಿಗಾರರ ಹುದ್ದೆಯಿಂದ ಶಿರಸ್ತೇದಾರ್ ಹುದ್ದೆಗೆ ಪದೋನ್ನತಿಯಿಂದ ಖಾಲಿಯಾದ 02 ಶೀಘ್ರಲಿಪಿಗಾರರ ಹುದ್ದೆಗಳನ್ನು ಒಟ್ಟು 04 ಹುದ್ದೆಗಳನ್ನು ಆಯ್ಕೆಗಾಗಿ ಪರಿಗಣಿಸಲಾಗಿ, ಪರಿಶಿಷ್ಟ ಪಂಗಡದ 01 ಮತ್ತು ಪ್ರವರ್ಗ-1ರ 01 ಹುದ್ದೆಗೆ ಯಾವುದೇ ಅಭ್ಯರ್ಥಿಗಳು ಲಭ್ಯವಿಲ್ಲದ ಕಾರಣ ಸದರಿ ಹುದ್ದೆಗಳನ್ನು ಭರ್ತಿ ಮಾಡದೆ ಬ್ಯಾಕ್‌ಲಾಗ್ ಆಗಿ ಉಳಿಸಿಕೊಂಡು, ಇನ್ನುಳಿದ 02 ಶೀಘ್ರಲಿಪಿಗಾರರ ಹುದ್ದೆಗೆ ಈ ಕೆಳಕಂಡ ಅಭ್ಯರ್ಥಿಗಳನ್ನು ಮಾತ್ರ ಅವರ ಹೆಸರಿನ ಮುಂದೆ ಸೂಚಿಸಿರುವ ರಿಕ್ತ ಸ್ಥಾನಗಳಿಗೆ ಮುಖ್ಯ ಪಟ್ಟಿಯಲ್ಲಿ ಆಯ್ಕೆ ಮಾಡಲಾಗಿದೆ.

**ಕರ್ನಾಟಕ ಗ್ರಾಹಕ ಸಂರಕ್ಷಣಾ ರಾಜ್ಯ ಆಯೋಗ ಮತ್ತು ಜಿಲ್ಲಾ ವೇದಿಕೆಗಳ ಸೇವೆಯ ಹೈದ್ರಾಬಾದ್-ಕರ್ನಾಟಕದ ರಾಜ್ಯ ವ್ಯಾಪಿ ಸ್ಥಳೀಯ ವೃಂದದಲ್ಲಿ ಖಾಲಿ ಇರುವ 02 ಶೀಘ್ರಲಿಪಿಗಾರರ ಮುಖ್ಯ ಪಟ್ಟಿ**

**(Main List)**

| ಕ್ರಮ ಸಂಖ್ಯೆ | ಅರ್ಜಿ ಸಂಖ್ಯೆ | ಅಭ್ಯರ್ಥಿಗಳ ಹೆಸರು | ಆಯ್ಕೆ ಮಾಡಿರುವ ರಿಕ್ತ ಸ್ಥಾನದ ಹೆಸರು |
|---|---|---|---|
| 1. | 25 | ಸುವರ್ಣ | ಸಾಮಾನ್ಯ (ಸಾಮಾನ್ಯ ಅಭ್ಯರ್ಥಿ) |
| 2. | 4 | ಚಲಪತಿರಾಜ | ಪರಿಶಿಷ್ಟ ಜಾತಿ (ಸಾಮಾನ್ಯ ಅಭ್ಯರ್ಥಿ) |

ಈ ನಡವಳಿಯ ಅನುಸಾರ ಆಯ್ಕೆಗೊಂಡ ಅಭ್ಯರ್ಥಿಗಳ ಗುಣ-ನಡತೆ ಬಗ್ಗೆ ಹಾಗೂ ಅಭ್ಯರ್ಥಿಗಳು ಸರ್ಕಾರಿ ನೌಕರಿ ಹೊಂದಲು ಅನರ್ಹವಾಗುವಂತಹ ಯಾವುದಾದರೂ ದೂರು ಅಥವಾ ತನಿಖೆಯನ್ನು ಎದುರಿಸಿದ್ದಾರೆಯೇ ಅಥವಾ ಎದುರಿಸುತ್ತಿದ್ದಾರೆಯೇ ಮತ್ತು ಶಿಕ್ಷೆಗೆ ಒಳಗಾಗಿದ್ದಾರೆಯೇ ಎಂಬುದರ ಬಗ್ಗೆ ಸಂಬಂಧಪಟ್ಟ ಪೊಲೀಸ್ ವರಿಷ್ಠಾಧಿಕಾರಿಗಳಿಂದ ಪೊಲೀಸ್ ವರದಿಯನ್ನು ಪಡೆದುಕೊಂಡ ನಂತರ ಹಾಗೂ ಈ ಅಭ್ಯರ್ಥಿಗಳ ಪೈಕಿ ಪ್ರವರ್ಗಗಳಡಿಯಲ್ಲಿ ಆಯ್ಕೆಗೊಂಡ ಅಭ್ಯರ್ಥಿಗಳ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳ ಸಾಚಾತನವನ್ನು ಸಂಬಂಧಪಟ್ಟ ಪ್ರಾಧಿಕಾರದಿಂದ ಪರಿಶೀಲಿಸಿಕೊಂಡು, ವರದಿಯನ್ನು ಪಡೆದುಕೊಂಡ ನಂತರ ಪರಿಶೀಲಿಸಿ, ನೇಮಕಾತಿ ಆದೇಶ ಹೊರಡಿಸುವ ಬಗ್ಗೆ ಕ್ರಮವಹಿಸಲು ತೀರ್ಮಾನಿಸಿದೆ.

ಈ ನಡವಳಿಯ ಅನುಸಾರ ಆಯ್ಕೆಗೊಂಡ ಅಭ್ಯರ್ಥಿಗಳು ನೇಮಕಾತಿ ಆದೇಶ ಹೊರಡಿಸುವ ಮುನ್ನ ಯಾವುದೇ ರೀತಿಯಲ್ಲಿ ನೇಮಕಾತಿಗೆ ಸಬಂಧಿಸಿದ ಹಕ್ಕನ್ನು ಹೊಂದಿರುವುದಿಲ್ಲ.

(ನ್ಯಾಯಮೂರ್ತಿ ಬಿ.ಎಸ್. ಇಂದ್ರಕಲಾ)
ಅಧ್ಯಕ್ಷರು,
ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ
ಹಾಗೂ
ಶಿಸ್ತು ಪ್ರಾಧಿಕಾರಿ ಮತ್ತು ನೇಮಕಾತಿ ಪ್ರಾಧಿಕಾರಿ,
ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ
ಮತ್ತು ಜಿಲ್ಲಾ ವೇದಿಕೆಗಳ ಸೇವೆ.